**ದಿನಾಂಕ ಃ** 22.06.2022**.**
***(ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು.)***
**ಪಿ ಡಬ್ಲ್ಯೂ -** 1

**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ**

ಈ ಪ್ರಕರಣದಲ್ಲಿ ನಾನು 1ನೇ ಮೇಲ್ಮನವಿದಾರನಿದ್ದು, ನನ್ನ ಮುಖ್ಯವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ.

ಈ ದಿನ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ಅಸಲು ದಾವಾ ಸಂಖೆ 315/14 ರಲ್ಲಿಯ ತೀರ್ಪಿನ ಧೃಢೀಕೃತ ನಕಲು
2. ಅಸಲು ದಾವಾ ಸಂಖೆ 315/14 ರಲ್ಲಿಯ ಡಿಕ್ರಿಯ ಧೃಢೀಕೃತ ನಕಲು
3. ವೈಧ್ಯಕೀಯ ಪ್ರಮಾಣ ಪತ್ರ
4. ಎಕ್ಸ್ ಎಲ್ ಕೇರ್ ಅಸ್ಪತ್ರೆಯ ವೈಧ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಅವುಗಳನ್ನು ನಿಪಿ-1 ರಿಂದ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು- ಎದುರುದಾರರ 2 ಮತ್ತು 3ನೇ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

***(***ನಿಂಗಪ್ಪ ಪರಶುರಾಮ ಕೋಪರ್ಡೆ ***)***
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ :** 21.03.2023.

**(ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.)**

**ಪಿ ಡಬ್ಲ್ಯೂ -** 1

**ಪಾಟೀ ಸವಾಲು : ಎದುರುದಾರರ ಪರ ವಕೀಲರಿಂದ :**

2. ಓ.ಎಸ್.25/17 ರಲ್ಲಿ ನಮಗೆ ಅಂದರೆ ಪ್ರತಿವಾದಿಗಳಿಗೆ ಸಮನ್ಸ್ ಜಾರಿಯಾಗುತ್ತೆ, ನಾನು ಸಿದ್ದೇಗೌಡ ಎನ್ನುವವರ ವಕೀಲರನ್ನು ನೇಮಕ ಮಾಡಿದ್ದೆವು ಅಂದರೆ ನಮ್ಮ ಅಕ್ಕ – ಪ್ರೇಮಮ್ಮ ವಕೀಲರನ್ನು ನೇಮಕ ಮಾಡಿದ್ದರು. ಸದರಿ ದಾವದಲ್ಲಿ ತಕರಾರು ಸಲ್ಲಿಸಿಲ್ಲ ಅಂದರೆ ನನ್ನ ಅಕ್ಕನಿಗೆ ಗೊತ್ತು ನನಗೆ ಏನೂ ಗೊತ್ತಿಲ್ಲ. ಸದರಿ ದಾವಾ ವಾದಿ - ಕೋಮಲ ಪರವಾಗಿ ತಾಃ 31.10.2017 ರಂದು ಡಿಕ್ರಿ ಆಗಿರುತ್ತದೆ ಅಂದರೆ ಸರಿ. ವಾದಿ ಡಿಕ್ರಿ ಎಕ್ಸಿಕ್ಯೂಟ್ ಮಾಡುವುದಕ್ಕೆ ಎಕ್ಸಿಕ್ಯೂಷನ್ ಕೇಸ್ ನಂ. 6/18 ನ್ನು ದಾಖಲು ಮಾಡಿದರು. ಸದರಿ ಪ್ರಕರಣದಲ್ಲಿ ನ್ಯಾಯಾಲಯದಿಂದ ನಮಗೆ ನೋಟೀಸ್ ಕಳುಹಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ನಮ್ಮ ಅಕ್ಕನಿಗೆ ಗೊತ್ತು. ಆ ಕೇಸಿನಲ್ಲಿ ಕೆ.ಸಿ.ಮಧು ಎಂಬ ವಕೀಲರನ್ನು ನಮ್ಮ ಪರವಾಗಿ ನೇಮಕ ಮಾಡಿಕೊಂಡಿದ್ದೆವು ಅಂದರೆ ನಮ್ಮ ಅಕ್ಕ ಪ್ರೇಮಮ್ಮ ನೇಮಕ ಮಾಡಿದ್ದಳು. ಸದರಿ ಎಕ್ಸಿಕ್ಯೂಷನ್ ಪ್ರಕರಣದಲ್ಲೂ ಕೂಡ ತಕರಾರು ಸಲ್ಲಿಸಿಲ್ಲ ಅಂದರೆ ನನಗೆ ಗೊತ್ತಿಲ್ಲ. ನಮ್ಮ ಅಕ್ಕನಿಗೆ ಗೊತ್ತು.

3. ಜಡ್ಜಮೆಂಟ್ ಡಿಕ್ರಿ ಕಾಪಿ ಕೊಡುವಂತೆ ಯಾವಾಗ ಅರ್ಜಿ ಸಲ್ಲಿಸಿದ್ದೀರಾ ಎಂದು ತಾರೀಖು, ತಿಂಗಳು, ವರ್ಷ ನೆನಪಿಲ್ಲ, ಆದರೆ ಕರೋನೋ ಮುಗಿದ ಮೇಲೆ ಹಾಕಿದ್ದೇವೆ.

4. ಪ್ರೇಮಮ್ಮ ಇವರಿಗೆ ಕೇಸು ನಡೆಸಲು ಅಧಿಕಾರ ಪತ್ರ ಕೊಟ್ಟಿದ್ದೀರಾ ಅಂದರೆ ಇಲ್ಲ. ಸಿದ್ದೇಗೌಡ ವಕೀಲರು ಡಿಕ್ರಿ ಬಗ್ಗೆ ನಮಗೆ ತಿಳಿಸಿದ್ದರು, ಆದರೂ ಕೂಡ ಮೂರು ವಿಳಂಬ ಆದ ಮೇಲೆ ಯಾವುದೇ ಕಾರಣ ಹೇಳದೇ ಸುಳ್ಳು ಅರ್ಜಿ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ.

5. ಯಾಕೆ ವಿಳಂಬ ಆಗದೇ ಎಂಬ ಬಗ್ಗೆ ಯಾವುದೇ ಸರಿಯಾದ ಕಾರಣ ತೋರಿಸಿಲ್ಲ ಮತ್ತು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ )
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**